ಅತ್ಯಾಚಾರಕ್ಕೆ ಧಿಕ್ಕಾರ
ಸುಧಾ ಕಾಳಜಿ

ಮನುಷ್ಯನ ಸಹಜ ಪ್ರವೃತ್ತಿಗಳಾದ ನಿದ್ದೆ, ಹಸಿವು, ಮೈಥುನಗಳನ್ನು ಶಿಸ್ತುಬದ್ಧವಾಗಿ ಪಳಗಿಸುತ್ತಾ ಹೋಗುತ್ತೇವೆ. ಆದರೆ ಕಾಮದ ವಿಷಯದಲ್ಲಿ ಇದು ಸಾಧ್ಯವಾಗಿಲ್ಲ.

# ಕಾಮನೆಗಳ ಪಳಗಿಸುವುದು ಸಾಧ್ಯವಾದರೆ...



**ರೂಪ ಹಾಸನ**
ಕವಯಿತ್ರಿ, ಸಾಮಾಜಿಕ ಕಾರ್ಯಕರ್ತೆ

ಭೀಕರ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ಮತ್ತು ನಗರಕೇಂದ್ರಿತ, ಮಾಧ್ಯಮಪ್ರೇರಿತ ಅತ್ಯಾಚಾರಗಳನ್ನು ಮಾತ್ರ ಸಮಾಜ ಗಂಭೀರವಾಗಿ ಸ್ವೀಕರಿಸುತ್ತಿದೆ. ಈ ಧೋರಣೆಯ ಬಗ್ಗೆ ಗಂಭೀರವಾಗಿ ಯೋಚಿಸಬೇಕು. ಆದರೆ, ನಿತ್ಯ ಸಹಜವೆಂಬಂತೆ ನಡೆದು, ಮುಚ್ಚಿಹೋಗುತ್ತಿರುವ ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳನ್ನೂ ತುರ್ತಿನ ವಿಷಯವೆಂದು ಪರಿಗಣಿಸಲು ಎಲ್ಲಿ ಸಾಧ್ಯವಾಗುತ್ತಿದೆ?

ದೇಶದಲ್ಲಿ ಪ್ರತಿ ಗಂಟೆಗೆ ನಾಲ್ಕು ಮಕ್ಕಳು ಲೈಂಗಿಕವಾಗಿ ದುರ್ಬಳಕೆಗೊಳಗಾಗುತ್ತಿದ್ದಾರೆ. ಪ್ರತಿ ಗಂಟೆಗೆರಡು ಮಕ್ಕಳು ಅತ್ಯಾಚಾರಕ್ಕೆ ಬಲಿಯಾಗುತ್ತಿದ್ದಾರೆ. ಲೈಂಗಿಕ ತೃಷೆ ತೀರಿಸಿಕೊಳ್ಳಲು ಪ್ರತಿ ಎರಡು ನಿಮಿಷಗಳಿಗೊಮ್ಮೆ ಒಬ್ಬ ಹೆಣ್ಣುಮಗಳು ಮಾರಾಟವಾಗುತ್ತಿದ್ದಾಳೆ. ಪ್ರತಿ ಗಂಟೆಗೆ ನಾಲ್ಕು ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಇವೆಲ್ಲವೂ ದಾಖಲಾದ ಕ್ರೌರ್ಯವಷ್ಟೆ. ಇವೆಲ್ಲವನ್ನೂ ಒಂದೇ ಚೌಕಟ್ಟಿನಲ್ಲಿ ಪರಿಗಣಿಸದಿದ್ದರೆ ಪರಿಹಾರ ಹುಡುಕುವುದು ಕಷ್ಟ.

ಬಹುಶಃ ಕಾಮವನ್ನು ಮೋಜಿಗಾಗಿ ಬಳಸುತ್ತಿರುವ ಏಕೈಕ ಪ್ರಾಣಿಯೆಂದರೆ ಮನುಷ್ಯ ಮಾತ್ರ. ಹೀಗೆಂದೇ ಈ ಕಾಮದ ಹಿಂಸಾರತಿಗೆ ಹಲವು ಬಾರಿ ಹೆಣ್ಣು ಬಲಿಪಶುವಾಗುತ್ತಿದ್ದಾಳೆ. ವಿವಿಧ ಬಗೆಗಳಲ್ಲಿ ಅವಳನ್ನು ಲೈಂಗಿಕ ದುರ್ಬಳಕೆ ಮಾಡಿಕೊಳ್ಳುವ ಹಂತಕ್ಕೆ ವ್ಯವಸ್ಥೆ ಬಂದು ತಲುಪಿದೆ. ನಿದ್ದೆ, ಹಸಿವು, ಮೈಥುನಗಳು ಮನುಷ್ಯನ ಮೂಲಭೂತವಾದ ಸಹಜ ಪ್ರವೃತ್ತಿಗಳು. ಆದರೆ ನಿದ್ದೆ–ಹಸಿವುಗಳನ್ನು ಶಿಸ್ತುಬದ್ಧವಾಗಿ ಪಳಗಿಸುತ್ತಾ ಹೋಗುತ್ತೇವೆ. ಕಾಮದ ವಿಷಯದಲ್ಲಿ ಇದು ಸಾಧ್ಯವಾಗಿಲ್ಲ.

ಕಾಮನೆಗಳನ್ನು ಪಳಗಿಸುವುದಕ್ಕೆ ಬೇಕಾದ ಅರಿವು ಮತ್ತು ತರಬೇತಿ ನೀಡುವ ಕೆಲಸಗಳು ನಮ್ಮಲ್ಲಿ ಆಗುತ್ತಿರುವುದು ಕಡಿಮೆ. ಮಗುವಿನ ಜನನದೊಂದಿಗೇ ಹುಟ್ಟುವ ಲೈಂಗಿಕತೆಯನ್ನು ಅದೊಂದು ಚರ್ಚಿಸಬಾರದ ಅಸಹ್ಯ ವಿಷಯ ಎಂದು ಭಾವಿಸಿ ಮಕ್ಕಳಿಗೆ ಆ ಕುರಿತು ಏನನ್ನೂ ತಿಳಿವಳಿಕೆ ನೀಡುವುದೇ ಇಲ್ಲ. ತನ್ನ ದೇಹದ ಲೈಂಗಿಕ ಅಂಗಾಂಗಗಳು, ಅದರ ನಿರ್ವಹಣೆ, ಬೆಳವಣಿಗೆ, ಕಾಮದ ಉದ್ದೇಶ, ಅದರ ನೈತಿಕ ಜವಾಬ್ದಾರಿಯ ಬಗೆಗೆ ಮಕ್ಕಳಿಗೆ ಪೋಷಕರು ತಿಳಿವಳಿಕೆ ಹೇಳುವುದೇ ಕಡಿಮೆ. ಇದನ್ನೆಲ್ಲ ಕಡ್ಡಾಯವಾಗಿ ಹೇಳಿ, ಕಾಮನೆಗಳನ್ನು ಪಳಗಿಸುವ ವಿಧಾನಗಳನ್ನು ತಿಳಿಹೇಳಿ ಮಕ್ಕಳನ್ನು, ಅದರಲ್ಲೂ ಗಂಡುಮಕ್ಕಳನ್ನು ಬೆಳೆಸುವ ಅನಿವಾರ್ಯತೆಯಿದೆ. ಪ್ರಾಥಮಿಕ ಶೈಕ್ಷಣಿಕ ಹಂತದಿಂದ ಅಳವಡಿಸಿದರೆ ಈ ಕ್ರೌರ್ಯವನ್ನು ಬಹಳಷ್ಟು ಮಟ್ಟಿಗೆ ನಿಯಂತ್ರಿಸಬಹುದೆನಿಸುತ್ತದೆ.

ಅಪ್ರಾಪ್ತರನ್ನೂ ಒಳಗೊಂಡಂತೆ ಲೈಂಗಿಕ ಅಪರಾಧಗಳಲ್ಲಿ ತೊಡಗುತ್ತಿರುವವರ ಸಂಖ್ಯೆ ದಿಗಿಲು ಹುಟ್ಟಿಸುವಷ್ಟು ಏರುತ್ತಿದೆ. ಇದೇ ಕಾರಣಕ್ಕೆ ಅಪರಾಧದಲ್ಲಿ ತೊಡಗುವವರ ಶಿಕ್ಷೆಯ ವಯಸ್ಸನ್ನು 18ರಿಂದ 16ಕ್ಕಿಳಿಸುವ ಕಾನೂನು ತಿದ್ದುಪಡಿಯೂ ಆಗಿದೆ. ಆದರೆ, ಅಪರಾಧಿಗಳಾಗಿ ಬಂಧಿಗಳಾದವರಲ್ಲಿ ಹೆಚ್ಚಿನವರು ಅಶ್ಲೀಲ ನೀಲಿ ಚಿತ್ರಗಳನ್ನು ನೋಡಿ ಪ್ರಚೋದನೆ ಪಡೆದಿದ್ದಾಗಿ ಹೇಳಿಕೊಂಡಿದ್ದಾರೆ. ನೆನಪಿರಲಿ; ಇದು ಸಹಜವಾಗಿ ಹುಟ್ಟಿದ ಕಾಮನೆಯಲ್ಲ. ಸಾಮಾಜಿಕವಾಗಿ ವಿಕೃತವಾಗಿ ಹೇರಲಾಗಿರುವಂಥದ್ದು. ಇವನ್ನು ನಿಯಂತ್ರಿಸುವ ಗುರುತರ ಹೊಣೆಗಾರಿಕೆಯನ್ನು ಇನ್ನಾದರೂ ಅರಿಯಬೇಕಿದೆ.

ಕಾನೂನನ್ನು ಬಲಗೊಳಿಸುವುದು, ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸುವುದು, ಗಲ್ಲಿಗೇರಿಸುವುದು, ಹೆಣ್ಣುಮಕ್ಕಳ ಚಲನಶೀಲತೆಯನ್ನು ನಿರ್ಬಂಧಿಸುವುದು, ಅವರಿಗೆ ಕರಾಟೆ ಕಲಿಸುವುದು, ವಸ್ತ್ರಸಂಹಿತೆ ಅಳವಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದು, ಎಲ್ಲರನ್ನೂ ಅನುಮಾನದಿಂದ ನೋಡುವಂತೆ ತರಬೇತಿ ನೀಡುವುದು, ಹೆಣ್ಣುಮಕ್ಕಳ ರಕ್ಷಣೆಗಾಗಿ ಹಳ್ಳಿಹಳ್ಳಿಗಳಲ್ಲಿ ಕಾವಲುಪಡೆಗಳನ್ನು ನಿರ್ಮಿಸುವುದು... ಇವೆಲ್ಲ ಪರಿಹಾರ ಕ್ರಮಗಳೆಂದು ನೋಡುತ್ತಿದ್ದೇವೆ. ನಿಜ, ಇವೆಲ್ಲಾ ಹೊರರೂಪದ ಪ್ರತಿಕ್ರಿಯೆ, ರಕ್ಷಣಾ ಸಿದ್ಧತೆಗಳಷ್ಟೇ. ಇದರಿಂದ ಮೂಲಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸಾಧ್ಯವಿಲ್ಲವೆನಿಸುತ್ತದೆ.

ಮನುಷ್ಯ ತನ್ನ ಲೈಂಗಿಕ ಕಾಮನೆಗಳನ್ನು ಸಾಮಾಜಿಕ ಶಿಸ್ತಿಗಾಗಿ ಹತ್ತಿಕ್ಕಿದ್ದರೂ ಸುಪ್ತಪ್ರಜ್ಞೆಯ ಆಳದಲ್ಲಿ ಎಲ್ಲೋ ಅಡಗಿರುವ ಅದು, ಅನುಕೂಲಕರ ಸಮಯ, ಸಂದರ್ಭ, ಪರಿಸರ, ಎಲ್ಲಕ್ಕಿಂಥಾ ಮುಖ್ಯವಾಗಿ ಪ್ರಚೋದನೆ ಸಿಕ್ಕರೆ ದಾಳಿ ಮಾಡುವುದಕ್ಕೆ ಕಾಯುತ್ತಿರುತ್ತದೆ. ಹೀಗಾಗಿ ಇಂತಹ ಕಾಮನೆಗಳನ್ನು ನಿರ್ಲಕ್ಷಿಸುವುದು ಅಥವಾ ಮುಚ್ಚಿಡುವುದರ ಬದಲಿಗೆ ಮನುಷ್ಯ ಸಹಜ ಪ್ರವೃತ್ತಿಯನ್ನು ಅತ್ಯಂತ ಸಹಜ ರೀತಿಯಲ್ಲಿ ನಿರ್ವಹಿಸುವುದಕ್ಕೆ, ಪಳಗಿಸುವುದಕ್ಕೆ ಪ್ರಯತ್ನಿಸಬೇಕೆನಿಸುತ್ತದೆ.

ಮೊದಲಿಗೆ ನಮ್ಮ ಇಡೀ ವ್ಯವಸ್ಥೆ ಮಗುಕೇಂದ್ರಿತವಾಗಿ ಯೋಚಿಸುವಂತೆ ಪುನರ್ ರೂಪುಗೊಳ್ಳಬೇಕು. ಹೀಗಾಗಿ ಪ್ರತಿ ಮಗುವೂ ಮೊದಲಿಗೆ ಶೈಕ್ಷಣಿಕ ವ್ಯವಸ್ಥೆಯೊಳಗೆ ಕಡ್ಡಾಯವಾಗಿ ಬರಬೇಕು. ಕನಿಷ್ಠ ಹದಿನೆಂಟು ವರ್ಷದವರೆಗೆ ಪ್ರತಿ ಮಗುವಿಗೆ ಉಚಿತ, ಕಡ್ಡಾಯ, ಮನೋವೈಜ್ಞಾನಿಕ ನೆಲೆಯ, ವೈಚಾರಿಕ, ನೈತಿಕ ಮತ್ತು ಲೈಂಗಿಕ ಶಿಕ್ಷಣವನ್ನು ನೀಡಬೇಕು. ಅಂದರೆ ವಿದ್ಯಾಭ್ಯಾಸದ ಭಾಗವಾಗಿ ನೈತಿಕತೆ ಆಧಾರಿತ ಲೈಂಗಿಕ ಶಿಕ್ಷಣವನ್ನು ನೀಡಿ, ಕಾಮನೆಗಳನ್ನು ಪಳಗಿಸುವ ಹದ ಕಲಿಸಬೇಕು. ಆದರೆ ಲೈಂಗಿಕ ಶಿಕ್ಷಣವನ್ನು ಯಾವ ವಯಸ್ಸಿನಲ್ಲಿ ನೀಡಲು ಪ್ರಾರಂಭಿಸಬೇಕು? ಯಾರು ನೀಡಬೇಕು? ಹೇಗೆ ನೀಡಬೇಕು? ಯಾವಾಗ? ಎಷ್ಟು ಪ್ರಮಾಣದ ಶಿಕ್ಷಣ? ಯಾವ ಹಂತಗಳಲ್ಲಿ ನೀಡಬೇಕು? ಎನ್ನುವುದನ್ನು ಮಾತ್ರ ಅತ್ಯಂತ ಎಚ್ಚರಿಕೆಯಿಂದ ಮತ್ತು ಸೂಕ್ಷ್ಮತೆಯಿಂದ ಮಾನವಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು, ಶಿಕ್ಷಣ ತಜ್ಞರು, ಸಮಾಜವಿಜ್ಞಾನಿಗಳು, ಮಕ್ಕಳೊಡನೆ ನಿರಂತರವಾಗಿ ಒಡನಾಡಿ ಕೆಲಸ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತರು ಸೇರಿ ನಿರ್ಧರಿಸಬೇಕು.

ಬಹುಶಃ ಲೈಂಗಿಕ ಶಿಕ್ಷಣದ ತಳಹದಿಯೇ ನಾವು ನಿದ್ದೆ ಮತ್ತು ಹಸಿವನ್ನು ಪಳಗಿಸಿ ಇಟ್ಟಂತೆ, ಕಾಮನೆಗಳನ್ನು ಪಳಗಿಸಿಡುವುದಾಗಬೇಕು. ಈ ಉದ್ದೇಶವನ್ನು ಸಾಕಾರಗೊಳಿಸಲು ಯಾವುದೇ ಮಗುವು ಶಾಲೆಯಿಂದ ಹೊರಗುಳಿಯದಂತೆ, ಬಾಲಕಾರ್ಮಿಕನಾಗದಂತೆ, ಬಾಲ್ಯವಿವಾಹಕ್ಕೊಳಗಾಗದಂತೆ, ಯಾವುದೇ ಕಾರಣಕ್ಕೆ ಶಾಲಾ ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸದಂತೆ ಸರ್ಕಾರ ಜವಾಬ್ದಾರಿಯನ್ನು ಕಡ್ಡಾಯವಾಗಿ ಹೊರಬೇಕು.

ಗಂಡುಹೆಣ್ಣು ಸಮಾನತೆಯ ನೆಲೆಯಲ್ಲಿ ಪರಸ್ಪರ ಗೌರವಿಸಿಕೊಳ್ಳುವ ಹಾಗೆ ದೇಹ, ಮನಸು, ಬುದ್ಧಿಗಳನ್ನು ಹದಗೊಳಿಸುವ ಆರೋಗ್ಯಕರ ಶಿಕ್ಷಣವನ್ನು ಪ್ರತಿ ಹಂತದಲ್ಲೂ ವಯಸ್ಸಿಗನುಗುಣವಾಗಿ ನೀಡುತ್ತಾ ಹೋಗಬೇಕು. ಜೊತೆಗೆ ಸಹಜ ಲೈಂಗಿಕತೆಯನ್ನು ವಿಕೃತ ಕಾಮವಾಗಿ ಪ್ರಚೋದನೆ ನೀಡಿ ಕೆರಳಿಸುತ್ತಿರುವ ಸಮೂಹ ಮಾಧ್ಯಮಗಳನ್ನು ಅತ್ಯಂತ ತುರ್ತಾಗಿ ನಿರ್ಬಂಧಿಸಲೇಬೇಕು.